# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 164, ವಿದ್ಯಾಪೀಠ ಬೆಂಗಳೂರು.

ಸಂಖ್ಯೆ: ಸ.ಅ/ವಾ-164/ /2022-23

ದಿನಾಂಕ: 04-07-2022

### ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 21-09-2020ರ ಆದೇಶದಂತೆ ದಿನಾಂಕ: 02-07-2022 ರಂದು ವಾರ್ಡ್ ಸಂಖ್ಯೆ: 164, ವಿದ್ಯಾಪೀಠದ ವಾರ್ಡ್ ಕಛೇರಿಯಲ್ಲಿ ನಡೆದ ಜುಲೈ ತಿಂಗಳ 1ನೇ ಶನಿವಾರದ 1ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ : ಬಿಬಿಎಂಪಿ ವಾರ್ಡ್ ಕಛೇರಿ, ವಿದ್ಯಾಪೀಠ ಸರ್ಕಲ್ ಹತ್ತಿರ

ಸಮಯ : ಸಂಜೆ 4.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ವಿಜಯ್‌ಕುಮಾರ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 2 | ಶ್ರೀ ಎಂ. ರಮೇಶ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-164, ವಿದ್ಯಾಪೀಠ |
| 3 | ಡಾ॥ ವಿನಿತ | ವೈದ್ಯಾಧಿಕಾರಿ (ಸಿ.ಟಿ ಬೆಡ್ ಆರೋಗ್ಯ ಕೇಂದ್ರ) |
| 4 | ಶ್ರೀ ವಿಷಕಂಠಯ್ಯ ಹೆಚ್.ಎನ್ | ಕೆಲಸ ಪರಿವೀಕ್ಷಕರು, ವಾರ್ಡ್-164, ವಿದ್ಯಾಪೀಠ |
| 5 | ಶ್ರೀ ಸತೀಶ್ ಆರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 164 |
| 6 | ಶ್ರೀಮತಿ ಭಾಗ್ಯಮ್ಮ | ಸಾರ್ವಜನಿಕರು |
| 7 | ಶ್ರೀ ನಿಖಿಲ್ ಗೌಡ | ಸಾರ್ವಜನಿಕರು |
| 8 | ಶ್ರೀ ಮನೋಜ್ ಪಾಪಣ್ಣ | ಸಾರ್ವಜನಿಕರು |
| 9 | ಶ್ರೀ ಲಕ್ಷಣ | ಸಾರ್ವಜನಿಕರು |
| 10 | ಶ್ರೀ ಜಿ.ಎನ್. ರೆಡ್ಡಿ | ಘ.ತ್ಯಾ ನಿ ಗುತ್ತಿಗೆದಾರರು |
| 11 | ಶ್ರೀ ಡಿ. ರಾಜು | ಸಾರ್ವಜನಿಕರು |
| 12 | ಶ್ರೀ ಯೋಗಾನಂದ ಸಿ.ಎಸ್ | ಘ.ತ್ಯಾನಿ ಸೂಪರ್‌ವೈಸರ್ |
| 13 | ಶ್ರೀ ಜಯರಾಮೇ ಗೌಡ | ಸ್ಯಾನಿಟರಿ ಧಫೇದಾರ್ |
| 14 | ಶ್ರೀ ಸಾಯಿಕುಮಾರ್ | ಸಾರ್ವಜನಿಕರು |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ ಆರ್. ವಿಜಯ್‌ಕುಮಾರ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸ್ವಾಗತ ಕೋರುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಸಭೆಯಲ್ಲಿ ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಾರ್ಡ್ ಅಭಿಯಂತರರು ವರದಿಯನ್ನು ಓದಿ ತಿಳಿಸಿದರು.

1. ಅಕಾಲಿಕ ಮಳೆಯಿಂದ ವಾರ್ಡ್ ವ್ಯಾಪ್ತಿಯ ಅಶೋಕನಗರ ಮತ್ತು ಸುತ್ತಮುತ್ತಲಿನ ರಸ್ತೆಗಳಲ್ಲಿ ಹಾಗೂ ಹಲವು ಕಡೆಗಳಲ್ಲಿ ಮರಗಳ ರೆಂಬೆಕೊಂಬೆಗಳು ಬಿದ್ದಿದ್ದು, ಅವುಗಳನ್ನು ತಕ್ಷಣ ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿ ಕೊಟ್ಟಿರುವುದಾಗಿ ಸಭೆಯ ಗಮನಕ್ಕೆ ವಾರ್ಡ್ ಅಭಿಯಂತರರು ತಂದಿರುತ್ತಾರೆ ಹಾಗೂ ಸಭೆಯಲ್ಲಿ ಹಾಜರಿದ್ದ ಶ್ರೀ ನಿಖಿಲ್ ಗೌಡ, ಸಾರ್ವಜನಿಕರು ರವರು ಮಳೆಗಾಲವಾದ್ದರಿಂದ ಹಳೆಯ ಏರಿಯಾಗಳಾಗಿದ್ದು, ಮರಗಳು ಬೃಹದಾಕಾರವಾಗಿ ವಿಸ್ತಾರಗೊಂಡಿದ್ದು, ಸಾರ್ವಜನಿಕ ಕಟ್ಟಡಗಳಿಗೆ ಮತ್ತು ಬೆಸ್ಕಾಂ ವಿದ್ಯುತ್ ಸರಬರಾಜಿಗೆ ತೊಂದರೆಯಾಗುತ್ತಿದ್ದು, ಅವುಗಳನ್ನು ಮರದ ರೆಂಬೆಕೊಂಬೆಗಳನ್ನು ಟ್ರಿಮ್ ಮಾಡಿ, ಮುಂದಿನ ದಿನಗಳಲ್ಲಿ ವಿದ್ಯುತ್ ಅವಘಡಗಳು ಆಗದಂತೆ ತಡೆಯಲು ಅನುಕೂಲವಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದಿದ್ದು, ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಅರಣ್ಯ ವಿಭಾಗದ ಶ್ರೀ ತ್ಯಾಗರಾಜ್ ರವರ ಗಮನಕ್ಕೆ ತರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

2. ಮಂಜುನಾಥ ಕಾಲೋನಿ ಮುಖ್ಯರಸ್ತೆಯಲ್ಲಿ ಚರಂಡಿ ಕಾಮಗಾರಿಯನ್ನು ಜರೂರಾಗಿ ಕೈಗೊಳ್ಳುವಂತೆ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿರುವ ಮೇರೆಗೆ ಮಳೆನೀರಿನಿಂದ ಸಂಭವಿಸುವ ಅವಘಡಗಳಿಗೆ ಲಭ್ಯವಿರುವ ಅನುದಾನದಲ್ಲಿ ರೂ: 20.00 ಲಕ್ಷಗಳ ಅನುದಾನವನ್ನು ಬಳಸಿಕೊಂಡು ಮಂಜುನಾಥ ಕಾಲೋನಿಯಲ್ಲಿ ಹೂಳು ತುಂಬಿರುವ ಚರಂಡಿಗಳನ್ನು ಸ್ವಚ್ಛ ಮಾಡುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಮಾನ್ಯ ಅಧ್ಯಕ್ಷರ ಜೊತೆ ಚರ್ಚಿಸಿರುವಂತೆ ಅಂದಾಜು ಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆಯೆಂದು ತಿಳಿಸಿರುತ್ತಾರೆ ಹಾಗೂ ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶವು ತಗ್ಗು ಪ್ರದೇಶದಲ್ಲಿರುವ ಬಡಾವಣೆಯಾಗಿದ್ದು, ಆಗಿಂದಾಗ್ಗೆ ಮಳೆಗಾಲದಲ್ಲಿ ಮಳೆನೀರು ಮನೆಗಳಿಗೆ ಹಾನಿಯುಂಟು ಮಾಡುತ್ತಿರುವುದನ್ನು ಹಿಂದಿನ ನಿಕಟಪೂರ್ವ ಪಾಲಿಕೆ ಸದಸ್ಯರು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಿದ್ದು, ವಾರ್ಡ್ ಅಭಿಯಂತರರು ವಾರ್ಡ್ ತಪಾಸಣೆ ಮಾಡಿ ಲಭ್ಯವಿದ್ದ ರೂ: 20.00 ಲಕ್ಷಗಳ ಅನುದಾನವನ್ನು ಬಳಸಿಕೊಂಡು ರಸ್ತೆ ಬದಿಯ ಮಳೆನೀರು ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆದು ಚರಂಡಿಯನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಮಾನ್ಯ ಅಧ್ಯಕ್ಷರ ಜೊತೆ ಚರ್ಚಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆಯೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

3. ವಾರ್ಡ್‌ನಲ್ಲಿ ಕೋವಿಡ್-19 ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯವರಿಗೆ ಸಮರ್ಪಕವಾಗಿ ಔಷಧಿ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳಲು ಸೂಚಿಸಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಜನಸಂದಣಿ ಪ್ರದೇಶಗಳಲ್ಲಿ ಸಾರ್ವಜನಿಕ ಸಾಮಾಜಿಕ ಅಂತರ (Social Distance) ಕಾಪಾಡಿಕೊಳ್ಳುವುದು ಹಾಗೂ ಮಾಸ್ಕ ಧರಿಸುವುದರ ಬಗ್ಗೆ ಅರಿವು ಮೂಡಿಸಲು ಹಾಗೂ ಕ್ರಮಕೈಗೊಳ್ಳಲು ಮಾರ್ಷಲ್‌ಗಳಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಗಸ್ತು ಮಾಡುವಂತೆ ಸೂಚಿಸಲಾಗಿರುತ್ತದೆ, ಕೋವಿಡ್ ಪರೀಕ್ಷೆಗಳನ್ನು ಪ್ರತಿ ದಿನ ಸರಾಸರಿ 50 ಟೆಸ್ಟ್‌ಗಳನ್ನು ನಡೆಸುಲಾಗುತ್ತಿದ್ದು, 1 ರಿಂದ 2 ಜನರಿಗೆ ಪಾಸಿಟಿವ್ ಲಕ್ಷಣಗಳು ಕಂಡುಬರುತ್ತಿವೆ ಎಂದು ತಿಳಿಸಿರುತ್ತಾರೆ ಹಾಗೂ ಕೋವಿಡ್ ಲಸಿಕಾ ಕಾರ್ಯಕ್ರಮವನ್ನು ಸಮರ್ಪಕವಾಗಿ ನಿರ್ವಹಿಸಿದ್ದು, ದಿನಾಂಕ: 23-06-2022 ವರೆಗೆ ಕೋವಿಡ್ ಲಸಿಕೆಯ ವಿಶೇಷ ಅಭಿಯಾನವನ್ನು ಮುಕ್ತಾಯವಾಗಿದ್ದು, 100 ಜನರಿಗೆ ಕೋವ್ಯಾಕ್ಸಿನ್‌ನ್ನು ಮತ್ತು 220 ಜನರಿಗೆ ಕೋವಿಶೀಲ್ಡ್ ಲಸಿಕೆಯನ್ನು ಹಾಗೂ 60 ವರ್ಷ ಮೇಲ್ಪಟ್ಟ ಒಟ್ಟು 190 ಜನರಿಗೆ ಬೂಸ್ಟರ್ ಡೋಸ್ ನೀಡಲಾಗಿದೆ ಎಂದು ಡಾ॥ ವಿನಿತ ರವರ ಸಭೆಯಲ್ಲಿ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

4. ವಾರ್ಡ್ ವ್ಯಾಪ್ತಿಯ ಎಲ್ಲಾ ಪಾರ್ಕ್‌ಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ವಾರಕ್ಕೆ ಒಂದು ಬಾರಿ ಔಷಧಿ ಸಿಂಪಡಣೆ ನಡೆಯುತ್ತಿದೆ. ಈ ಸಂಧರ್ಭದಲ್ಲಿ ಸಭೆಯಲ್ಲಿ ಹಾಜರಿದ್ದ ಶ್ರೀ ಲಕ್ಷಣ್ ಮತ್ತು ಶ್ರೀ ಮನೋಜ್ ರಾವ್ ಪಾಪಣ್ಣ ರವರು ಶ್ರೀ ಕಂಠೇಶ್ವರ ಉದ್ಯಾನವನದಲ್ಲಿ ಸೊಳ್ಳೆಗಳು ಹೆಚ್ಚಾಗಿರುವುದಾಗಿ ಸಭೆಯ ಗಮನಕ್ಕೆ ತಂದಿದ್ದು, ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಶ್ರೀ ಸತೀಶ್ .ಆರ್ . ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಪಾರ್ಕ್‌ಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸೊಳ್ಳೆ ಔಷಧಿ ಸಿಂಪಡಣಾ ಮತ್ತು ಫಾಗಿಂಗ್ ಮಾಡಲು ಹಾಗೂ ಕಸ ವಿಲೇವಾರಿಯಲ್ಲಿ ಯಾವುದೇ ಲೋಪದೋಷಗಳು ಆಗದಂತೆ ಕ್ರಮಕೈಗೊಳ್ಳುವಂತೆ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳಿಗೆ ಅಧ್ಯಕ್ಷರು ಸಭೆಯಲ್ಲಿ ತಿಳಿಸಿರುತ್ತಾರೆ.

5. ವಾರ್ಡ್ ವ್ಯಾಪ್ತಿಯಲ್ಲಿ ಕಂದಾಯ ಆಧಿಕಾರಿಗಳು ಆದ ಶ್ರೀ ಸುರೇಶ್ ರವರು 2022–23ನೇ ಸಾಲಿನಲ್ಲಿ ರೂ 500–00ಲಕ್ಷ ಬೇಡಿಕೆ ಇದ್ದು ಈ ಇದೂವರೆಗೂ ರೂ: 347.00 ಲಕ್ಷಗಳು ವಸೂಲಾಗಿದ್ದು, 15 ದಿನಗಳಲ್ಲಿ ರೂ: 12 ಲಕ್ಷ ಕಂದಾಯ ವಸೂಲು ಮಾಡಲಾಗಿರುತ್ತದೆ. ಮತದಾರರ ಗುರುತಿನ ಚೀಟಿ ವಿತರಣೆ ನಿರಂತರವಾಗಿ ನಡೆಯುತ್ತಿರುತ್ತದೆ. 18 ವರ್ಷ ಮೇಲ್ಪಟ್ಟವರೆಲ್ಲರಿಗೂ ಉಚಿತವಾಗಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿರುತ್ತದೆ ಎಂದು ಕಂದಾಯ ಅಧಿಕಾರಿಗಳು ಅಧ್ಯಕ್ಷರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ.

6. ಕೋವಿಡ್‌ಗೆ ತುತ್ತಾಗಿ ಮರಣ ಹೊಂದಿರುವ ವ್ಯಕ್ತಿಗಳ ಅವಲಂಬಿತರಿಗೆ ರಾಜ್ಯ ಸರ್ಕಾರದಿಂದ 1.00 ಲಕ್ಷ ಮತ್ತು ಕೇಂದ್ರ ಸರ್ಕಾರದಿಂದ ರೂ: 50 ಸಾವಿರ ರೂಪಾಯಿಗಳನ್ನು ನೀಡುವ ಸಂಬಂಧ ಅವಲಂಬಿತರಿಗೆ ಕೇಂದ್ರ ಸರ್ಕರದಿಂದ ರೂ: 50 ಸಾವಿರ ನೇರವಾಗಿ ಅವರ ಖಾತೆಗಳಿಗೆ ಜಮಾವಣೆಯಾಗಿರುತ್ತದೆ ಉಳಿದ ರಾಜ್ಯ ಸರ್ಕಾರದ ಅನುದಾನದ ಲಭ್ಯತೆಯ ಮೇಲೆ ಸರ್ಕಾರವು ಬಿಡುಗಡೆ ಮಾಡಬೇಕಾಗಿರುತ್ತದೆ ಎಂದು ಸಭೆಗೆ ಕಂದಾಯ ನಿರೀಕ್ಷಕರು ಮಾನ್ಯ ಅಧ್ಯಕ್ಷರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಸಭೆಯಲ್ಲಿ ಚರ್ಚಿಸಿದ್ದು, ಈ ವಿಷಯಗಳ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಈ ಸಭೆಯನ್ನು ಅಧ್ಯಕ್ಷರು ಮುಕ್ತಾಯಗೊಳಿಸಿದರು.

04/07/2022

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 164, ವಿದ್ಯಾಪೀಠ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 164, ವಿದ್ಯಾಪೀಠ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು(ದಕ್ಷಿಣ) ಬೃ.ಬೆ.ಮ.ಪಾಲಿಕೆ, ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
7. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ವಾರ್ಡ್ ಕಛೇರಿಯ ಸೂಚನಾ ಫಲಕಕ್ಕೆ
10. ಕಛೇರಿ ಪ್ರತಿ.